(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಉಳಿದವರೆಲ್ಲರೂ ಹೋದರು, ಇವರು ಹೋಗಲಿಲ್ಲವೆಂದರೆ ಇವರನ್ನು ಉಚ್ಚಾಟನೆ ಮಾಡಿದ್ದಾರೆಯೇ?

ಶ್ರೀ ಸಿ.ಬೈರೇಗೌಡ:- ಉತ್ತರ ಇಲ್ಲವೆಂದಾದರೂ ಹೇಳಲಿ.

ಅಧ್ಯಕ್ಷರು:- ಆ ಬಗ್ಗೆ ಉತ್ತರವನ್ನು ತರಿಸಬೇಕಲ್ಲವೇ? ಮಾನ್ಯ ಸಚಿವರೇ ಉತ್ತರವನ್ನು ತರಿಸಿಕೊಳ್ಳಬೇಕೆಂದು ಹೇಳಿ. ತಾವು ಪ್ರತ್ಯೇಕವಾಗಿ ಪ್ರಶ್ನೆಯನ್ನು ಕೇಳಿ ಎಂದು ಹೇಳಬೇಕು.

ಶ್ರೀ ಎಂ.ಶಿವಣ್ಣ:- ಮಗು ಸತ್ತುಹೋಗಿದೆ ಎಂಬುದಕ್ಕೆ ಅವರೇ ಉತ್ತರವನ್ನು ಕಂಡುಕೊಳ್ಳಬೇಕು. ಸರ್ಕಾರದಲ್ಲಿ ನಾವು ಯಾವುದಾದರೂ ಔಷಧಿಯನ್ನು ಗಿಡಕ್ಕೆ ಕೊಡುತ್ತೇವೆಂದರೆ, ಸರ್ಕಾರ ಏಕಾಏಕಿಯಾಗಿ ಕೊಡುವುದಕ್ಕೆ ಬರುವುದಿಲ್ಲ. ತಾಂತ್ರಿಕ ತಜ್ಞರ ಅಭಿಪ್ರಾಯವನ್ನು ಪಡೆಯಲೇಬೇಕು. ಅವರು ಒಂದಲ್ಲ ಹತ್ತಾರು ಅಭಿಪ್ರಾಯಗಳನ್ನು ವಿಜ್ಞಾನಿಗಳು ಸರ್ಕಾರದ ಮುಂದಿಟ್ಟಿದ್ದಾರೆ.

ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಅವರು ಉತ್ತರವನ್ನು ಕೊಡುವುದಕ್ಕೆ ತಯಾರಿಲ್ಲ. ಇದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಶ್ರೀ ಸಿ.ಬೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಜಯಪ್ರಕಾಶ ಹೆಗಡೆ:- ಮಾನ್ಯ ಅಧ್ಯಕ್ಷರೆ .....

Mr.Speaker:- I have not allowed you.

ಶ್ರೀ ಕೆ.ಜಯಪ್ರಕಾಶ ಹೆಗಡೆ:- ನನಗೆ ಅಲೋ ಮಾಡದೆ ಇದ್ದರೆ ನಾನು ಸಭೆಯಿಂದ ಹೊರಗೆ ಹೋಗುತ್ತೇನೆ.

(ಈ ಹಂತದಲ್ಲಿ ಶ್ರೀ ಕೆ.ಜಯಪ್ರಕಾಶ ಹೆಗಡೆಯವರು ಸಭಾತ್ಯಾಗ ಮಾಡಿದರು)

ಪುರಸಭೆ : ಪಟ್ಟಣ ಪ್ರದೇಶದಲ್ಲಿ ಹಳದಿ ಪಡಿತರ ಚೀಟಿ ಹಂಚಿಕೆ

127(936) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಳದಿ ಪಡಿತರ ಚೀಟಿಯನ್ನು ಪುರಸಭೆ: ಪಟ್ಟಣ ಪ್ರದೇಶಗಳಲ್ಲಿರುವ ಕೇವಲ ಕೊಳಚೆ ಪ್ರದೇಶದಲ್ಲಿನ ಕುಟುಂಬದವರಿಗೆ ಸೀಮಿತಗೊಳಿಸದೆ ಸಮುದಾಯ ಸಮಾಜದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ಕುಟುಂಬದವರಿಗೂ ಈ ಚೀಟಿಯನ್ನು ಹಂಚಿಕೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಪುರಸಭೆ : ಪಟ್ಟಣ ಪ್ರದೇಶಗಳ ಕೊಳಚೆ ಪ್ರದೇಶದ ಹೊರಗೆ ವಾಸಿಸುವ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಯನ್ನು ನೀಡುವ ಉದ್ದೇಶ ಸರ್ಕಾರಕ್ಕಿಲ್ಲ.

ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್:- ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಮೊದಲನೆ ಪ್ರಶ್ನೆಗೆ ಪಟ್ಟಣ ಪ್ರದೇಶಗಳ ಕೊಳಚೆ ಪ್ರದೇಶದ ಹೊರಗೆ ವಾಸಿಸುವ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಯನ್ನು ನೀಡುವ ಉದ್ದೇಶ ಸರ್ಕಾರಕ್ಕೆ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿ ಬಡವರು ಗ್ರಾಮೀಣ ಪ್ರದೇಶಗಳಲ್ಲಿದ್ದಾರೆ, ಪಟ್ಟಣ ಪ್ರದೇಶಗಳಲ್ಲಿಯೂ ಸಹ ಇದ್ದಾರೆ. ನಗರಪ್ರದೇಶಗಳಲ್ಲಿ ಅನೇಕ ಬಡವರು ಕೊಳಚೆ ಪ್ರದೇಶಗಳಿಗಿಂತ ಅಲ್ಲೇ ವಾಸ ಮಾಡುತ್ತಿದ್ದಾರೆ. ನಗರಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗೆ ಇರುವವರು ಅನೇಕ ಕಡುಬಡವರು ಕೊಳಚೆ ಪ್ರದೇಶಗಳಿಗಿಂತ ಹೊರಗಡೆ ವಾಸಿಸುವಂತಹ ವ್ಯವಸ್ಥೆಗಳಿವೆ. ನಮ್ಮ ದೇಶದ ಜನಸಂಖ್ಯೆ ಎಷ್ಟೊಂದು ಹೆಚ್ಚಾಗಿದೆ ಅನೇಕ ಕಡು ಬಡವರಿಗೆ ಕೊಳಚೆ ಪ್ರದೇಶಗಳಲ್ಲೂ ಕೂಡ ಸ್ಥಾನ ಸಿಗುವುದಿಲ್ಲ. ಅಂತಹ ಸಂದರ್ಭದಲ್ಲಿ ಕೊಳಚೆ ಪ್ರದೇಶಗಳಿಗಿಂತ ಹೊರಗಡೆ/ ಇರುವಂತಹ ಕಡುಬಡವರು, ಯಾರು ಬಡತನದ ರೇಖೆಗಿಂತ ಕೆಳಗೆ ಇದ್ದಾರೆ ಅವರಿಗೆ ಈ ಹಳದಿ ಕಾರ್ಡನ್ನು ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಏಕೆ ಮಾಡಿಲ್ಲವೆಂದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ಇನ್ನು ಕೆಲವೊಂದು ಪಟ್ಟಣ ಪ್ರದೇಶಗಳಲ್ಲಿ ಕೊಳಚೆ ಪ್ರದೇಶಗಳಿಗಿಂತ ಕೀಳು ಮಟ್ಟದ ಪ್ರದೇಶಗಳಿದ್ದರೂ ಅವುಗಳು ಕೊಳಚೆ ಪ್ರದೇಶಗಳೆಂದು ಘೋಷಿಸಲ್ಪಟ್ಟಿಲ್ಲ. ಅಂತಹ ಪ್ರದೇಶಗಳಲ್ಲಿರುವಂತಹ ಕಡುಬಡವರಿಗೆ ಇವತ್ತು ನಾವು ಹಳದಿ ಕಾರ್ಡನ್ನು ಕೊಡದೆ ಹೋದರೆ ಆ ಒಂದು ಸೌಲಭ್ಯದಿಂದ ವಂಚಿತರಾಗುತ್ತಾರೆ. ಅದಕ್ಕಾಗಿ ನಾನು ತಮ್ಮ ಮೂಲಕ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರನ್ನು ಈ ಸಂದರ್ಭದಲ್ಲಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

11.10 ಎಎಂ.

ಅಧ್ಯಕ್ಷರು:- ಮಾನ್ಯಸದಸ್ಯರು ಸಪ್ಲಿಮೆಂಟರಿ ಪ್ರಶ್ನೆ ಕೇಳಿ, ಭಾಷಣ ಮಾಡಬೇಡಿ.

ಶ್ರೀ ಡೊಂಗರಗಾವ್ ಶಹಜಹಾನ್ ಇಸ್ಮಾಯಿಲ್:- ಕೊಳಚೆಪ್ರದೇಶ ಅಲ್ಲದೆ ಬೇರೆ ಕಡೆ ಇರುವ ಬಡವರಿಗೂ ಹಳದಿಕಾರ್ಡ್ ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಸುಮಾರು 1 ಕೋಟಿ 10ಲಕ್ಷದ 58ಸಾವಿರದ 728 ಕುಟುಂಬಗಳು ಬಡತನರೇಖೆ ಕೆಳಗೆ ಇದ್ದಾರೆಂದು ಗುರುತಿಸಿ ಅದರಲ್ಲಿ ನಾವು ಸುಮಾರು 56 ಲಕ್ಷದ 96ಸಾವಿರ ಕುಟುಂಬಗಳಿಗೆ ಹಸಿರುಕಾರ್ಡ್ ಕೊಟ್ಟಿದ್ದೇವೆ. 2 ಲಕ್ಷದ 64ಸಾವಿರ ಕುಟುಂಬಗಳಿಗೆ ಹಳದಿಕಾರ್ಡ್ ಕೊಟ್ಟಿದ್ದೇವೆ. 4ಲಕ್ಷದ 197ಕುಟುಂಬಗಳು ಬಡತನ ರೇಖೆ ಕೆಳಗೆ ಬರುತ್ತವೆ.. 69ಲಕ್ಷದ 93 ಸಾವಿರ ಪಡಿತರ ಚೀಟಿಗಳನ್ನು ಕೊಟ್ಟಿದ್ದೇವೆ. ಅಂದರೆ 1ಕೋಟಿ 10ಲಕ್ಷ ಕುಟುಂಬಗಳಲ್ಲಿ ಶೇಕಡ 57ರಷ್ಟು ಕುಟುಂಬಗಳು ಬಡತನ ರೇಖೆ ಕೆಳಗೆ ಬರುತ್ತವೆಂದು ಗುರುತಿಸಿ ಅವರಿಗೆ ಪಡಿತರ ಚೀಟಿಗಳನ್ನು ಕೊಟ್ಟಿದ್ದೇವೆ. ಕೇಂದ್ರ ಸರ್ಕಾರದವರು 31ಲಕ್ಷ ಕುಟುಂಬಗಳು ಬಡತನರೇಖೆ ಕೆಳಗೆ ಬರುತ್ತವೆಂದು ಗುರುತಿಸಿದ್ದಾರೆ. ಅದರ ಜೊತೆಗೆ ರಾಜ್ಯಸರ್ಕಾರ 32ಸಾವಿರ ಕುಟುಂಬಗಳನ್ನು ಕುರುತಿಸಿ 270 ಕೋಟಿ ರೂ ಹಣವನ್ನು ಕೊಡುತ್ತಿದ್ದೇವೆ. ಶೇಕಡ 57ರಷ್ಟು ಪಡಿತರ ಚೀಟಿಗಳನ್ನು ಬಡತನರೇಖೆ ಕೆಳಗೆ ತಂದಿದ್ದೇವೆ. ಇನ್ನು ಹೆಚ್ಚಿಗೆ ತರುವುದಕ್ಕೆ ಆಗುವುದಿಲ್ಲ.

ಶ್ರೀ ಡೊಂಗರಗಾವ್ ಶಹಜಹಾನ್ ಇಸ್ಮಾಯಿಲ್:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ, ಮಾನ್ಯ ಸಚಿವರು ಪಟ್ಟಣ ಪ್ರದೇಶದಿಂದ ಚುನಾಯಿತರಾಗಿ ಬಂದಿದ್ದಾರೆ. ಕೊಳಚೆ ಪ್ರದೇಶ ಬಿಟ್ಟು ಹೊರಗೆ ಇರುವಂತಹ ಅನೇಕ ಕಡು ಬಡವರಿಗೆ ಇನ್ನು ಜಾಸ್ತಿ ಟಾರ್ಗೆಟ್ ಫಿಕ್ಸ್ ಮಾಡದಿದ್ದರೆ ಇದು ಅನ್ಯಾಯವಾಗುತ್ತದೆ. ಸುಪ್ರೀಂಕೋರ್ಟ್ ಒಂದು ಆದೇಶ ಮಾಡಿದೆ. ನಮ್ಮ ದೇಶದಲ್ಲಿ ಆಹಾರಧಾನ್ಯ ಪಡೆಯಲಿಕ್ಕಾಗದೆ ಸಾಯುವವರಿಗೆ ನಾವು ವ್ಯವಸ್ಥೆ ಮಾಡಬೇಕೆಂದು ಹೇಳಿದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ತಾವು ಕ್ರಮ ಕೈಗೊಳ್ಳಬೇಕು. ಹಳದಿಕಾರ್ಡ್ ಕೊಡುವುದಕ್ಕೆ ಮೊದಲು ಹಸಿರು ಕಾರ್ಡ್ ಇತ್ತು. ಗ್ರಾಮಾಂತರಪ್ರದೇಶಗಳಲ್ಲಿ ಎಲ್ಲಾ ಬಡವರಿಗೂ ಕೊಡುತ್ತಿದ್ದಾರೆ. ಅದೇ ರೀತಿ ಪಟ್ಟಣಪ್ರದೇಶಗಳಲ್ಲಿ ಕೊಡುವುದಕ್ಕೆ ಕಾನೂನು ತಿದ್ದುಪಡಿ ಮಾಡಿ ಅಥವಾ ಕೇಂದ್ರ ಸರ್ಕಾರದಿಂದ ಹೆಚ್ಚಿನ ಸಹಾಯ ಪಡೆದು ಕೊಡುವುದು ಅತ್ಯಂತ ಅವಶ್ಯಕ ಇದೆಯೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಏನು ಕೊಳಚೆಪ್ರದೇಶ ಘೋಷಿತ ಮತ್ತು ಅಘೋಷಿತ ಎಂದು ಇರುವುದರಿಂದ ಬಡವರೆಲ್ಲಾ ಬಹುತೇಕ ಕವರ್ ಆಗುತ್ತಾರೆ.

ಶ್ರೀ ವಿ. ಸೋಮಣ್ಣ:- ಮಾನ್ಯ ಅಧ್ಯಕ್ಷರೆ, ಬಡತನರೇಖೆ ಕೆಳಗೆ ಇರತಕ್ಕ ಕುಟುಂಬಗಳು ಏನಿವೆ, ಕೇಂದ್ರಸರ್ಕಾರ ಇದಕ್ಕೆ ಇಂತಿಷ್ಟು ಎಂದು ಮಾಡುವ ಸಂದರ್ಭದಲ್ಲಿ ಎಲ್ಲೋ ಒಂದು ಕಡೆ ಎಡವಿರುವುದರಿಂದ ರಾಜ್ಯಸರ್ಕಾರ ಎಲ್ಲರಿಗೂ ಭರಿಸುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಸಚಿವರು ಹೇಳುತ್ತಿದ್ದಾರೆ. ಪ್ರತಿಯೊಬ್ಬರು ಹೇಳುತ್ತಾರೆ, ಇವತ್ತು ಕೇಂದ್ರಸರ್ಕಾರದ ಅಂಕಿ ಅಂಶಗಳಲ್ಲಿ ಎಲ್ಲೋ ಒಂದು ಕಡೆ ಎಡವಟ್ಟಾಗಿದೆ. ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ, ಮಾನ್ಯಸಚಿವರು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಘೋಷಿತ ಮತ್ತು ಅಘೋಷಿತವೆಂದು ಹೇಳುವುದಕ್ಕಿಂತ ಹೆಚ್ಚಾಗಿ ಬಡತನರೇಖೆ ಕೆಳಗೆ ಇರತಕ್ಕ ಕೊನೆ ಹಂತದಲ್ಲಿ ಯಾರಿದ್ದಾರೆ ಅವರು ಈವೊಂದು ವ್ಯವಸ್ಥೆಯಿಂದ ಲಾಭ ಪಡೆದುಕೊಳ್ಳುವುದು ಕಷ್ಟವಾಗುತ್ತದೆ. ಸುಪ್ರೀಂಕೋರ್ಟ್ ಆದೇಶವಿರುವುದರಿಂದ, ದಯಮಾಡಿ ಬಡತನರೇಖೆ ಕೆಳಗೆ ಯಾರಿದ್ದಾರೆ ಅದನ್ನು ಮಾಡುವಾಗ ನಾಲ್ಕು ಗೋಡೆಯ ಮಧ್ಯದಲ್ಲಿ ಕುಳಿತುಕೊಂಡು ಮಾಡಿರುವ ಅಂಕಿಅಂಶ ಏನಿದೆ ಅದು ಸರಿಯಾದುದಲ್ಲ. ಮಂತ್ರಿಗಳು ಎಲ್ಲಾ ಅಧಿಕಾರಿಗಳನ್ನು ಕರೆದು ಚರ್ಚೆಮಾಡಿ ಇದಕ್ಕೆ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳದಿದ್ದರೆ, ಒಂದೇ ವರ್ಗದ ಜನ ಒಬ್ಬರಿಗೆ ಕೊಟ್ಟು ಇನ್ನೊಬ್ಬರಿಗೆ ಕೊಡದೆ ಅನ್ಯಾಯ ಮಾಡತಕ್ಕದ್ದು ಸಾಧುವಾದ ಕ್ರಮವಲ್ಲ. ದಯಮಾಡಿ ತಕ್ಷಣ ಮಾನ್ಯಸಚಿವರು ಗಮನಹರಿಸಿ ಈ ರೀತಿ ಘೋಷಿತ ಮತ್ತು ಅಘೋಷಿತ ಬಡತನರೇಖೆಗಿಂತ ಕೆಳಗಿರತಕ್ಕ ಬಡವರು ಯಾರಿದ್ದಾರೆ ನಿಜವಾದ ಬಡವರಿಗೆ ಯಾವ ಹಕ್ಕನ್ನು ಕೊಡಬೇಕಾಗಿದೆ ಕೊಡಬೇಕಾಗಿರತಕ್ಕ ಸವಲತ್ತುಗಳನ್ನು ಕೊಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯಸಚಿವರು ಸೂಚನೆಯನ್ನು ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ನಾಗರಾಜ್:- ಮಾನ್ಯ ಅಧ್ಯಕ್ಷರೆ, ಪ್ರಶ್ನೆಯ ಮೂಲ ಉದ್ದೇಶವೇನೆಂದರೆ, ಪಟ್ಟಣಪ್ರದೇಶಗಳಲ್ಲಿ ಬರೀ ಕೊಳಚೆ ಪ್ರದೇಶದಲ್ಲಿರುವಂತಹ ಬಡವರಿಗೆ ಮಾತ್ರ ಕೊಡಬೇಕೆಂದು ಸರ್ಕಾರದಿಂದ ಒಂದು ಆಜ್ಞೆ ತಹಶೀಲ್ದಾರ್‌ರವರಿಗೆ ಹೋಗಿದೆ. ಕೊಳಚೆಪ್ರದೇಶವಲ್ಲದೆ ಬೇರೆ ಕಡೆ ಇರತಕ್ಕ ಬಡವರನ್ನು ಕವರ್ ಮಾಡುತ್ತೀರಾ?

ಶ್ರೀ ಜಿ.ಎಸ್. ಗಡ್ಡದೇವರಮಠ್:- ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ನೇಕಾರರು, ಕೂಲಿಕಾರರು ಬೀಡಿ ಕಟ್ಟುವವರು ಕೊಳಚೆ ಪ್ರದೇಶ ಮತ್ತು ಬೇರೆ ಕಡೆ ಪಟ್ಟಣಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಹಮಾಲರು ಎಲ್ಲರೂ ಒಟ್ಟಿಗೆ ವಾಸ ಮಾಡುತ್ತಿರುತ್ತಾರೆ. ಎಲ್ಲರಿಗೂ ಸರ್ಕಾರ ಹಳದಿಕಾರ್ಡ್ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಘೋಷಿತ ಮತ್ತು ಅಘೋಷಿತವೆಂದು ಹೇಳಿದರೆ ಎಲ್ಲಾ ಬಡವರು ಬರುತ್ತಾರೆ. ಮಾನ್ಯ ಕಟ್ಟಾ ಸುಬ್ರಮಣ್ಯನಾಯ್ಡುರವರು ಪ್ರಶ್ನೆ ಕೇಳಿದ್ದರು. ಉತ್ತರ ಕೊಡುವ ಸಂದರ್ಭದಲ್ಲಿ ನಗರದ ಎಲ್ಲಾ ಶಾಸಕರ ಸಭೆ ಕರೆದು ಸರಿಮಾಡುತ್ತೇನೆಂದು ಹೇಳಿದ್ದೇನೆ.

ಸಹಕಾರ ಸಂಘಗಳಲ್ಲಿನ ಸಿಬ್ಬಂದಿಗೆ ವೇತನಶ್ರೇಣಿ, ತುಟ್ಟಿಭತ್ಯೆ ಇತ್ಯಾದಿ ಸೌಲಭ್ಯ ಒದಗಿಸಲು ಸರ್ಕಾರದ ಅನುಮತಿ

129(886) **ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :** ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಆರ್ಥಿಕವಾಗಿ ಸ್ವಾವಲಂಬಿಯಾಗಿರುವ ಸಹಕಾರ ಸಂಘಗಳಿಗೆ ಸಿಬ್ಬಂದಿ ಬಲ, ವೇತನ ಶ್ರೇಣಿ, ತುಟ್ಟಿಭತ್ಯೆ ಇನ್ನಿತರ ಸೌಲಭ್ಯ ಒದಗಿಸಲು ಸರ್ಕಾರದ ಅನುಮತಿ ಅಗತ್ಯವೇ?

ಆ) ಇದರಿಂದ ಸಹಕಾರ ಸಂಘಗಳಿಗೆ ತೀರಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದರ ಬಗ್ಗೆ ತಿದ್ದುಪಡಿ ತರಲು ಸರ್ಕಾರ ಆಲೋಚನೆ ಮಾಡುವುದೇ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) :

ಅ) ಹೌದು

ಆ) ಇಲ್ಲ

ಇ) ವಿಷಯವು ಪರಿಶೀಲನೆಯಲ್ಲಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ನಾವು ವಿಕೇಂದ್ರೀಕರಣ ವ್ಯವಸ್ಥೆಯನ್ನು ಬಲಪಡಿಸುವ ಬಗ್ಗೆ ಎಲ್ಲಾ ಹಂತದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದಿಂದ ಹಿಡಿದು ರಾಜ್ಯಸರ್ಕಾರದ ತನಕ ಈ ವ್ಯವಸ್ಥೆಯನ್ನು ಬಲಪಡಿಸಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಆದರೆ ಸಹಕಾರಿ ಕ್ಷೇತ್ರದಲ್ಲಿ ಸರ್ಕಾರ ಎಲ್ಲಾ ವ್ಯವಸ್ಥೆಯನ್ನು ಕೇಂದ್ರೀಕೃತಗೊಳಿಸುತ್ತಿದೆ. ಈಗ ಸುಮಾರು 28 ಸಾವಿರ ಸಹಕಾರಸಂಘಗಳಿವೆ. ನನಗಿರುವ ಮಾಹಿತಿ ಪ್ರಕಾರ ಸಹಕಾರಸಂಘಗಳಲ್ಲಿ ರಾಜ್ಯಸರ್ಕಾರದ ಬಜೆಟ್‌ಗಿಂತ ಜಾಸ್ತಿ ಬಂಡವಾಳ ಇದೆ. ಪರ್ಯಾಯ ಸರ್ಕಾರವನ್ನು ನಡೆಸುವಷ್ಟು ಆ ವ್ಯವಸ್ಥೆಯಲ್ಲಿ ಸಹಕಾರಸಂಘಗಳನ್ನು ನಡೆಸುತ್ತಿದ್ದಾರೆ. ಅವುಗಳಿಗೆ ಸಿಬ್ಬಂದಿ ನೇಮಕವಾಗಿಲ್ಲ. ಅಲ್ಲಿರುವ ನೌಕರರಿಗೆ ತುಟ್ಟಿಭತ್ಯೆ ವೇತನಶ್ರೇಣಿ ನೀಡಲಿಕ್ಕೆ ಪೀವನ್, ಕ್ಲರ್ಕ್ ನೇಮಕ ಮಾಡಿಕೊಳ್ಳಬೇಕಾದರೂ ಬೆಂಗಳೂರಿಗೆ ಬರಬೇಕು. ಈ ರೀತಿಯ ಕೇಂದ್ರೀಕೃತ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಇದನ್ನು ತಪ್ಪಿಸುವುದಕ್ಕೆ ತಾವು ಕಾನೂನಿಗೆ ತಿದ್ದುಪಡಿ ತಂದು ವ್ಯವಸ್ಥೆ